23 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಮತ್ತು
ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮ ವಿಶೇಷ ನ್ಯಾಯಾಧೀಶರು,
ಬೆಂಗಳೂರು ಸಿಟಿ. (ನ್ಯಾಯಾಂಗಣ-24)

ಸ್ಪೆಷಲ್ ಸಿ.ಸಿ. ಸಂಖ್ಯೆ: **468/2016**

ಫ್ರಾಸಾ.30 ಚಾಸಾ.40
ದಿಃ 22.01.2026

| | | |
|---|---|---|
| ಸಾಕ್ಷಿಯ ಹೆಸರು | : | ಕರಬಸಪ್ಪ ಶಿರಕೊಳ್ |
| ತಂದೆಯ ಹೆಸರು | : | ಶಿವರಾಯಪ್ಪ ಶಿರಕೊಳ್ |
| ವಯಸ್ಸು | : | 69 ವರ್ಷ |
| ವೃತ್ತಿ | : | ನಿವೃತ್ತ ಸಹಾಯಕ ಅಭಿಯಂತರರು, ಡಿಎಂಜಿ, ಹೊಸಪೇಟ್ |
| ವಾಸ ಸ್ಥಳ | : | ಧಾರವಾಡ. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಎಸ್.ಪಿ.ಪಿ.ಯವರಿಂದಃ-

1. ಜುಲೈ 2013 ರಿಂದ ಜುಲೈ 2017 ರವರೆಗಿನ ಅವಧಿಯಲ್ಲಿ ಹೊಸಪೇಟೆಯ ಡಿಎಂಜಿ ಕಛೇರಿಯ ಸಯಾಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿಃ23.05.2015 ರಂದು ಬೆಳಿಗ್ಗೆ 8 ಗಂಟೆ ಸುಮಾರಿಗೆ ಈ ಪ್ರಕರಣದ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ, ಹೊಸಪೇಟೆಯ ಅಮರಾವತಿ ಪ್ರವಾಸಿ ಮಂದಿರಕ್ಕೆ ಹೋಗಿ ಅವರನ್ನು ಭೇಟಿಯಾದೆ. ಆಗ ಅವರು ಹೊಸಪೇಟೆ ತಾಲ್ಲೂಕಿನ ಕೆಲವು ಗಣಿ ಪ್ರದೇಶಗಳು ಹಾಗೂ ಸ್ಟಾಕ್-ಯಾರ್ಡ್ ಗಳಿಂದ ಬೇಲೆಕೇರಿ ಬಂದರಿಗೆ ಅಕ್ರಮವಾಗಿ ಕಬ್ಬಿಣದ ಅದಿರನ್ನು ಸಾಗಾಟ ಮಾಡಿದ್ದ ಬಗ್ಗೆ ಸ್ಥಳ ಪರಿಶೀಲನೆ ಮಾಡಬೇಕಾಗಿದೆ ಎಂದು ತಿಳಿಸಿದ ಅವರು, ಸಹಕರಿಸಬೇಕೆಂದು ನನ್ನನ್ನು ಕೇಳಿಕೊಂಡರು. ಆ ಸಮಯದಲ್ಲಿ ನರಸಿಂಹಮೂರ್ತಿ ಮತ್ತು ಕಾಳಿದಾಸ ಎಂಬುವವರು ಪಂಚಸಾಕ್ಷಿಗಳಾಗಿ, ಗ್ರಾಮ ಲೆಕ್ಕಿಗರಾದ ಮಂಜುನಾಥ ಮತ್ತು ಅನಿಲ್ ಕುಮಾರ್, ಕಂದಾಯ ನಿರೀಕ್ಷಕರಾದ ಸಿದ್ದಪ್ಪ ಹಾಗೂ ಅರಣ್ಯ ಇಲಾಖೆಯಿಂದ ರಾಜಶೇಖರ್ ಲಮಾಣಿ, ನಮ್ಮ ಇಲಾಖೆಯ ಭೂ ವಿಜ್ಞಾನಿ ಮಲ್ಲೇಶ್ ಇವರುಗಳು ಹಾಜರಿದ್ದರು.

2. ಪ್ರವಾಸಿ ಮಂದಿರದಿಂದ ಮೊದಲು ನಾವೆಲ್ಲರು ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿಯೊಂದಿಗೆ ಕಾರಿಗನೂರಿನ ಜಿ.ಜಿ.ಬ್ರದರ್ಸ್ ರವರಿಗೆ ಸೇರಿದ್ದ ಎಂ.ಎಲ್.2522 ಗೆ

ಸಂಬಂಧಿಸಿದ ಗಣಿ ಪ್ರದೇಶಕ್ಕೆ ಹೋದೆವು. RY Logistics ರವರ loading supervisor ಆಗಿದ್ದ ಹೆಚ್.ಡಿ. ಬಸವರಾಜ್ ಎಂಬುವವರು ನಮ್ಮನ್ನೆಲ್ಲಾ ಪ್ರವಾಸಿ ಮಂದಿರದಿಂದ ಆ ಗಣಿ ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದರು. ಆ ಗಣಿ ಪ್ರದೇಶವನ್ನು ತನಿಖಾಧಿಕಾರಿಗಳು ನಮ್ಮ ಸಮಕ್ಷಮ ಪರಿಶೀಲನೆ ಮಾಡಿದಾಗ ಅಲ್ಲಿ ಒಂದು ತೂಕದ ಯಂತ್ರ ಇತ್ತು. ಅಲ್ಲಲ್ಲಿ ಕಬ್ಬಿಣದ ಅದಿರಿನ ಸಣ್ಣ ಸಣ್ಣ ಗುಡ್ಡೆಗಳು ಕಂಡುಬಂದವು. ಆ ಸಮಯಕ್ಕೆ ಹೆಚ್.ಡಿ. ಬಸವರಾಜ್ ರವರು ಇಲ್ಲಿಂದಲೇ ಕಬ್ಬಿಣದ ಅದಿರನ್ನು ಬೇಲೆಕೇರಿ ಬಂದರಿಗೆ ಸಾಗಿಸಲಾಗುತ್ತಿತ್ತು ಎಂದು ತಿಳಿಸಿದರು.

3. ಅಲ್ಲಿಂದ ಸದರಿ ಹೆಚ್.ಡಿ.ಬಸವರಾಜ್ ರವರು ನಮ್ಮನ್ನೆಲ್ಲಾ ಕಲ್ಲಹಳ್ಳಿ ಗ್ರಾಮದ ಸರ್ವೆ ನಂ.149/1, 149/2 ಮತ್ತು 150 ಜಮೀನುಗಳಲ್ಲಿದ್ದ ವಿ-ನಾಗಪ್ಪ ಪ್ಲಾಟ್ ಗೆ ಕರೆದುಕೊಂಡು ಹೋದರು. ಅಲ್ಲಿ ತನಿಖಾಧಿಕಾರಿ ನಮ್ಮ ಸಮಕ್ಷಮ ಸ್ಥಳವನ್ನು ಪರಿಶೀಲಿಸಿದಾಗ, ಸಣ್ಣ ಸಣ್ಣ ಕಬ್ಬಿಣದ ಅದಿರಿನ ಗುಡ್ಡೆಗಳು ಕಂಡುಬಂದವು. ಹಾಜರಿದ್ದ ಬಸವರಾಜ್ ರವರು ಇಲ್ಲಿಂದಲೂ ಸಹ ಕಬ್ಬಿಣದ ಅದಿರನ್ನು ಬೇಲೆಕೇರಿ ಬಂದರಿಗೆ ಸಾಗಿಸಲಾಗುತ್ತಿತ್ತು ಎಂದು ಮಾಹಿತಿ ನೀಡಿದರು.

4. ಅಲ್ಲಿಂದ ಪುನಃ ಸದರಿ ಬಸವರಾಜ್ ರವರು ನಮ್ಮನ್ನೆಲ್ಲಾ ಜೈಸಿಂಗ್ ಪುರ ಗ್ರಾಮದ ಸರ್ವೆ ನಂ.25 ರಲ್ಲಿದ್ದ ಜಮೀನಿನ ಬಳಿ ಕರೆದುಕೊಂಡು ಹೋದರು. ಅಲ್ಲಿದ್ದ ಒಂದು ಗೋಡೆಯ ಮೇಲೆ ಕನ್ನಡ ಭಾಷ್ಷಯಲ್ಲಿ 3-SVK/WB/003 ಎಂದು ಬರೆಯಲಾಗಿತ್ತು. ಈ ಜಮೀನಿನ ಮಾಲೀಕರ ಬಗ್ಗೆ ಹಾಜರಿದ್ದ ಗ್ರಾಮ ಲೆಕ್ಕಿಗರಿಂದ ಮಾಹಿತಿ ಪಡೆದುಕೊಂಡರು. ಆ ಜಾಗದಲ್ಲಿ SVK ಹೆಸರಿನ ಸ್ಟಾಕ್-ಯಾರ್ಡ್ ಇದ್ದ ಬಗ್ಗೆ ಗೊತ್ತಾಯಿತು. ಆ ಜಾಗವನ್ನು ಪರಿಶೀಲಿಸಿದಾಗ ಅಲ್ಲಿ ಸಣ್ಣ ಸಣ್ಣ ಅದಿರಿನ ಗುಡ್ಡೆಗಳೊಂದಿಗೆ ತೂಕದ ಯಂತ್ರವೂ ಸಹ ಕಂಡುಬಂದವು. ಬಸವರಾಜ್ ರವರು ಈ ಜಾಗದಿಂದಲೂ ಸಹ ಕಬ್ಬಿಣದ ಅದಿರನ್ನು ಬೇಲೆಕೇರಿ ಬಂದರಿಗೆ ಸಾಗಿಸಲಾಗುತ್ತಿತ್ತು ಎಂದು ಮಾಹಿತಿ ನೀಡಿದರು.

5. ಅಲ್ಲಿಂದ ಪುನಃ ಜೈಸಿಂಗ್ ಪುರದ ಮೇಲ್ಕಂಡ ಸ್ಟಾಕ್-ಯಾರ್ಡ್ ಜಾಗದಿಂದ ನಮ್ಮನ್ನೆಲ್ಲಾ ಬಸವರಾಜ್ ರವರು ಸಿದ್ದಾಪುರ ಗ್ರಾಮದ ಸ್ವಸ್ತಿಕ್ ನಾಗರಾಜ್ ಸ್ಟಾಕ್-ಯಾರ್ಡ್ ಇದ್ದ ಜಾಗಕ್ಕೆ ಕರೆದುಕೊಂಡು ಹೋದರು. ಆ ಜಮೀನಿನ ಸರ್ವೆ ನಂ.64/ಪಿ1 ಇದರ

ಮಾಲೀಕತ್ವದ ಬಗ್ಗೆ ತನಿಖಾಧಿಕಾರಿಯು ಹಾಜರಿದ್ದ ಗಾಮ ಲೆಕ್ಕಿಗರಿಂದ ಮಾಹಿತಿ ಪಡೆದುಕೊಂಡರು. ಇಲ್ಲಿಂದಲೂ ಸಹ ಕಬ್ಬಿಣದ ಅದಿರನ್ನು ಬೇಲೆಕೇರಿ ಬಂದರಿಗೆ ಸಾಗಿಸಲಾಗುತ್ತಿತ್ತು ಎಂದು ಮಾಹಿತಿ ನೀಡಿದರು. ಮೇಲ್ಕಾಣಿಸಿರುವ ಎಲ್ಲಾ ಜಾಗಗಳನ್ನು ಪರಿಶೀಲಿಸಿದ ಬಗ್ಗೆ ತನಿಖಾಧಿಕಾರಿಯು ನಮ್ಮಗಳ ಸಮಕ್ಷಮ ರನ್ನಿಂಗ್ ಮಹಜರ್ ಕ್ರಮ ಜರುಗಿಸಿದರು. ಸದರಿ ಮಹಜರ್ ಗೆ ನಾನು ಸಹಿ ಮಾಡಿದ್ದೇನೆ. ದಾಖಲೆಯನ್ನು ಈಗಾಗಲೇ **ನಿ.ಪಿ.57** ಎಂದು ಗುರುತಿಸಲಾಗಿದ್ದು, ಇದರ ಕೊನೆಯ ಪುಟದಲ್ಲಿರುವ ನನ್ನ ಸಹಿಯನ್ನು **ನಿ.ಪಿ.57(ಇ)** ಎಂದು ಗುರುತಿಸಲಾಯಿತು. ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೇನೆ.

(ಆರೋಪಿಗಳ ಪರ ವಕೀಲರುಗಳಿಂದ ಪಾಟಿ ಸವಾಲು ಇರುವುದಿಲ್ಲ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓದಿ , ಹೇಳಿ, ಕೇಳಿ, ಸರಿ ಇದೆ
sd/-
(ಕೆ.ಎಂ.ರಾಧಾಕೃಷ್ಣ)
23 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು
ಬೆಂಗಳೂರು.